# ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

ಸಿ.ಸಿ. ಸಂಖ್ಯೆ **72/2019**

ಸಾಕ್ಷಿಯನ್ನು ದಿಃ **17.03.2022** ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.

| | | | |
|---|---|---|---|
| ಹೆಸರು | ರೇವಣ್ಣ | ಸಿಡಬ್ಲ್ಯೂಃ **5** | ಪಿಡಬ್ಲ್ಯೂಃ **3** |
| ತಂದೆಯ ಹೆಸರು | ಬಿ. ರಾಚಯ್ಯ | | |
| ವಯಸ್ಸು | **47** ವರ್ಷ | | |
| ಕೆಲಸ | ಇನ್ಸೂರೇನ್ಸ್ ಅಡ್‌ವೈಷರ್ | | |
| ವಾಸಸ್ಥಳ | ಹುಣಸೂರು | | |

ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ

ಪೊಲೀಸರು ನನ್ನನ್ನು ಪಂಚನನ್ನಾಗಿ ಬರಮಾಡಿಕೊಂಡು ನನ್ನ ಸಮಕ್ಷಮ ಮಹಜರ್ ಜರುಗಿಸಿಲ್ಲ ಹಾಗೂ ಯಾವುದೇ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡಿಲ್ಲ. ನಾನು ಪೊಲೀಸ್ ಠಾಣೆಗೆ ನನ್ನ ವಯಕ್ತಿಕ ಕೆಲಸದ ನಿಮಿತ್ತ ಹೋದಾಗ ಸುಮಾರು 3 ½ ವರ್ಷಗಳ ಹಿಂದೆ ಪೊಲೀಸರು ಅಂಗಡಿ ಕಳ್ಳತನವಾಗಿದೆ ಎಂದು ಪೊಲೀಸರು ನನ್ನ ಸಹಿ ಪಡೆದಿದ್ದರು.

ಈಗ ನೋಡುತ್ತಿರುವ ದಾಖಲೆ ಅಮಾನುತ್ತು ಮಹಜರ್ ನಲ್ಲಿ ನನ್ನ ಸಹಿ ಇದೆ. ಅಮಾನತ್ತು ಮಹಜರ್ ಅನ್ನು ನಿಪಿ.2 ಎಂದು ಗುರುತಿಸಲಾಯಿತು. ಸದರಿ ದಾಖಲಾತಿ ದೃಢೀಕೃತ ನಕಲಾದ್ದರಿಂದ ಸಾಕ್ಷಿಯ ಸಹಿಯನ್ನು ಗುರುತಿಸಲಾಗಿಲ್ಲ.

ಸುಮಾರು 5 ವರ್ಷಗಳ ಹಿಂದೆ ನಿಪಿ.2 ಕ್ಕೆ ಸಹಿ ಮಾಡಿದ್ದೆ. ಅದರಲ್ಲಿ ಏನು ಬರೆದಿದೆ ಬೇರೆ ಯಾರು ಸಹಿ ಮಾಡಿದ್ದಾರೆ ಗೊತ್ತಿಲ್ಲ. ಯಾವುದೇ ವಾಹನಗಳನ್ನು ನನ್ನ ಸಮಕ್ಷಮ ಅಮಾನತ್ತು ಪಡಿಸಿಕೊಂಡಿಲ್ಲ. ವಾಹನಗಳನ್ನು ನೋಡಿದರೆ ಗುರುತಿಸಲು ಆಗುವುದಿಲ್ಲ. ಈ ಪ್ರಕರಣದ ಬಗ್ಗೆ ನನಗೆ ಏನು ಗೊತ್ತಿರುವುದಿಲ್ಲ. ಯಾವುದೇ ವಸ್ತುಗಳನ್ನು ಗುರುತಿಸಲು ಆಗುವುದಿಲ್ಲ. ನನ್ನ ಸಮಕ್ಷಮ ಮಹಜರ್ ಜರುಗಿಸಿಲ್ಲ ಹಾಗೂ ಯಾವುದೇ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡಿಲ್ಲ.

ಪೊಲೀಸರು ನನಗೆ ಯಾವುದೇ ಆರೋಪಿಗಳನ್ನು ತೋರಿಸಿರುವುದಿಲ್ಲ. ನಾನು ಆ ಬಗ್ಗೆ ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ. ನ್ಯಾಯಾಲಯದ ಮುಂದಿರುವ ಆರೋಪಿಯನ್ನು ಹಾಗೂ ವಿ.ಸಿ. ಮೂಲಕ ಹಾಜರಾಗಿರುವ ಆರೋಪಿತರನ್ನು ನಾನು ಈ ಮೊದಲು ನೋಡಿಲ್ಲ.

(ಈ ಹಂತದಲ್ಲಿ ಮಾನ್ಯ ಸಅಅ ಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿ ತನ್ನ ಸಾಕ್ಷ್ಯವನ್ನು ಅಭಿಯೋಜನೆಗೆ ಪ್ರತಿಕೂಲವಾಗಿ ನುಡಿದಿರುವ ಕಾರಣ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಸಲಾಯಿತು)

<u>ಪಾಟೀಸವಾಲುಃ ಮಾನ್ಯ ಸಸಅ ರವರಿಂದಃ</u>

ದಿಃ 02.06.2018 ಬೆಳಿಗ್ಗೆ 5.45 ಗಂಟೆ ಸಮಯದಲ್ಲಿ ನಾನು ಹಾಗೂ ಚಾಸಾ–4 ರವರು ಎಸ್.ಜೆ ರಸ್ತೆಯಲ್ಲಿ ವಾಕ್ ಮಾಡುತ್ತಿದ್ದಾಗ ಪಟ್ಟಣ ಪೊಲೀಸರು ನನ್ನನ್ನು ಠಾಣೆಗೆ ಬರಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ಆ ಸಮಯದಲ್ಲಿ ಠಾಣೆಯಲ್ಲಿ ಸಂದೀಪ, ಕಿರಣ ಮತ್ತು ವಿನೋದ ಎಂಬ 3 ಜನ ಆರೋಪಿತರಿದ್ದರು ಎಂದರೆ ಸರಿಯಲ್ಲ. ಪೊಲೀಸರು ನಮ್ಮನ್ನು ವಸ್ತುಗಳನ್ನು ಅಮಾನತ್ತು ಪಡಿಸಿಕೊಳ್ಳಲು ಪಂಚರನ್ನಾಗಿ ಬರಮಾಡಿಕೊಂಡರು ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಮ್ಮ ಸಮಕ್ಷಮ ಆರೋಪಿತ ವಶದಿಂದ ಕೆಎ–11 1783 ನಕಲಿ ಬೋರ್ಡ್ ಹಾಕಿರುವ ಆಕ್ಟೀವಾ ಹೊಂಡಾ ವಾಹನವನ್ನು, ಸ್ಕೂಟರ್ ಸೀಟ್‌ನ ಒಳಗೆ ಇಟ್ಟಿದ್ದ 2 ಕಬ್ಬಿಣದ ಸರಳುಗಳನ್ನು ಹಾಗೂ ಆರೋಪಿ ಕಿರಣ ಹಾಜರುಪಡಿಸಿದ ಒಪ್ಪೋ ಕಂಪನಿಯ ಒಂದು ಬಿಳಿ ಹಾಗೂ ಗೋಲ್ಡ್ ಬಣ್ಣದ ಮೊಬೈಲ್ ಹಾಗೂ 2 ಸಿಮ್‌ಗಳನ್ನು ಹಾಗೂ 500 ರೂ.ಗಳ 4 ನೋಟುಗಳನ್ನು ಅಮಾನತ್ತು ಪಡಿಸಿಕೊಂಡರು ಎಂದರೆ ಸರಿಯಲ್ಲ. ಅದೇ ರೀತಿ ಆರೋಪಿ ವಿನೋದ ವಶದಿಂದ ಒಂದು ಗೋಲ್ಡ್ ಬಣ್ಣದ ಒಪ್ಪೋ ಮೊಬೈಲ್ ಮತ್ತು 500 ರೂ.ಗಳ 3

ನೋಟುಗಳನ್ನು , 200/ ರೂ. ಒಂದು ನೋಟ ಅಮಾನತ್ತು ಪಡಿಸಿಕೊಂಡರು ಎಂದರೆ ಸರಿಯಲ್ಲ .

ಅದೇ ರೀತಿ ಆರೋಪಿ ಸಂದೀಪ ವಶದಿಂದ 500 ರೂ.ಗಳ 2 ನೋಟುಗಳನ್ನು , 100/ ರೂ. ಒಂದು ನೋಟು , 20/-ರೂ.ಗಳ 100 ನೋಟುಗಳನ್ನು ಹಾಗೂ ಸ್ಯಾಮ್ ಸಾಂಗ್ ಕಂಪನಿಯ ಮೊಬೈಲ್ ಹಾಗೂ ಒಂದು ಸಿಮ್ ಅಮಾನತ್ತು ಪಡಿಸಿಕೊಂಡರು ಎಂದರೆ ಸರಿಯಲ್ಲ. ನಿ.ಪಿ.2 ಅನ್ನು ನಾನು ಓದಿದ ನಂತರ ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ಇದಕ್ಕೆ ಸಂಬಂಧಪಟ್ಟಂತೆ ನಾನು ದಿಃ 02.06.2018 ರಂದು ಈಗ ಓದಿ ಹೇಳಿದಂತೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಹೇಳಿಕೆ ಭಾಗವನ್ನು ನಿಪಿ.3 ಎಂದು ಗುರುತಿಸಲಾಯಿತು. ನನ್ನ ಸಮಕ್ಷಮ 3 ಆರೋಪಿತರ ವಶದಿಂದ 3 ಮೊಬೈಲ್, ಹಣ, ರಾಡು ಮತ್ತು ದ್ವಿಚಕ್ರ ವಾಹನವನ್ನು ವಶಪಡಿಸಿಕೊಂಡರು ಕೂಡ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಬಗ್ಗೆ ನಾನು ಪೊಲೀಸರ ಮುಂದೆ ಹೇಳಿಕೆ ಕೊಟ್ಟಿದ್ದರು ಕೂಡ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀಸವಾಲುಃ ಆರೋಪಿ ಪರ ವಕೀಲರು ಇಲ್ಲವೆಂದಿದ್ದಾರೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಶಿರಿನ್ ಜಾವೀದ್ ಅನ್ಸಾರಿ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.